57

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್.ವ್ಹಿ. ಸಂಕನೂರ ಇವರ ನಿಯಮ 330 ರ ಸೂಚನೆಗೆ ಉತ್ತರ.

**ಸೂಚನೆ:**

ಪರಿಶಿಷ್ಟ ಜಾತಿಗೆ ಸೇರಿದ ಚೆನ್ನದಾಸರ ಸಮುದಾಯ ಇದಕ್ಕೆ ಇರುವ ಪರ್ಯಾಯ ಪದಗಳಾದ ದಾಸರ/ದಾಸರು/ಬಂಡಿಗಿ ದಾಸರ ಇತ್ಯಾದಿ ಇವುಗಳನ್ನು ಸಮನಾಂತರವಾಗಿ ಪರಿಗಣಿಸಿ ಪರಿಶಿಷ್ಟ ಜಾತಿ ಸರ್ಟಿಫಿಕೇಟ್ ಕೊಡುವ ಬಗ್ಗೆ ಸಂಬಂಧಪಟ್ಟ ಪ್ರಾಧಿಕಾರಕ್ಕೆ ನಿರ್ದೇಶನ ನೀಡುವ ಬಗ್ಗೆ ವಿಷಯವನ್ನು ಪ್ರಸ್ತಾಪಿಸುವ ಕುರಿತು.

ಉತ್ತರ:

ಭಾರತ ಸರ್ಕಾರದ ಅಧಿಸೂಚನೆಗಳಂತೆ ಕರ್ನಾಟಕ ರಾಜ್ಯದ ಪರಿಶಿಷ್ಟ ಜಾತಿ ಪಟ್ಟಿಯ ಕ್ರಮ ಸಂಖ್ಯೆ (29)ರಲ್ಲಿ Chenna Dasar, Holaya Dasar ಜಾತಿಯನ್ನು ಸೇರಿಸಲಾಗಿದೆ. ಸದರಿ 2 ಸಮುದಾಯಗಳಿಗೆ ನಿಯಮಾನುಸಾರ ಪರಿಶೀಲಿಸಿ ಪರಿಶಿಷ್ಟ ಜಾತಿ ಪ್ರಮಾಣ ಪತ್ರಗಳನ್ನು ನೀಡಲಾಗುತ್ತಿದೆ.

ಸರ್ಕಾರದ ಆದೇಶ ಸಂಖ್ಯೆ: SWD 225 BCA 2000, ದಿನಾಂಕ:30-03-2002ರಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಾತಿಗಳ ಪ್ರವರ್ಗ-1ರ ಪಟ್ಟಿಯ ಕ್ರಮ ಸಂಖ್ಯೆ: 12. (a) Dasari, (b) Dasaru, (c) Chakravadya-Dasa (d)Dang-Dasar (e) Dombi-Dasaru ಜಾತಿಯನ್ನು ನಮೂದಿಸಲಾಗಿರುತ್ತದೆ. ಈ ಸಮುದಾಯಗಳು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಪಟ್ಟಿಯಲ್ಲಿರುವುದರಿಂದ, ಪರಿಶಿಷ್ಟ ಜಾತಿ ಪ್ರಮಾಣ ಪತ್ರಗಳನ್ನು ನೀಡಲು ಅವಕಾಶವಿರುವುದಿಲ್ಲ.

ಸಕಇ 551 ಎಸ್ ಎಲ್ ಪಿ 2024

(ಡಾ.ಹೆಚ್.ಸಿ ಮಹದೇವಪ್ಪ)
ಸಮಾಜ ಕಲ್ಯಾಣ ಸಚಿವರು.